Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ ೨೮ ಸಂಚಿಕೆ 187] ಗುರುವಾರ 19—4—45 [3 ಪೈ

ಹೊಸಹೊಸ ಸುದ್ದಿ

ಹಿಂದೂಸ್ಥಾನವು ದಕ್ಷಿಣ ಆಫ್ರಿಕ ರಾಜ್ಯದಲ್ಲಿ ಕೈ ಹಾಕುವುದನ್ನು ಜ ಸ್ಟ್ ಸ್ತವರು ನಿರಾಕರಿಸಿರ ವರು.

ಆಸ್ಟ್ರೇಲಿಯಾದಲ್ಲಿ ರೈಲ್ವೆ ವೇಗವನ್ನು ಹೆಚ್ಚಿಸಲು 70 ವಿ. ಲಿಯ ವ್ಯಾಂಡು ಯೋ ಜನೆಯ ಶಿಫಾರಸು ಮಾಡಲ್ಪಟ್ಟಿದೆ.

ಮಧ್ಯರಾತ್ರಿಯಲ್ಲಿ ಮಿ. ಡಿ. ಪಿ. ಯ ನ್ನು ಬಂದು ಮಾಡಲಾಗಿರುತ್ತೆ.

ಇಟಲಿಯಲ್ಲಿನ ಮಿತ್ರಸೇನೆಯು ಅ ರ್ಜೆಂಟೀನಾವನ್ನು ಸುತ್ತುಗಟ್ಟಿದೆ.

ರಷ್ಯನ್ನರು ಆಸ್ಟ್ರಿಯಾ ಚೆಕ್ಕೋ ಕೇಂ ದ್ರವನ್ನು ಆಕ್ರಮಿಸಿರುವರು

ಲಾಸ್‌ಏಂಜಲ್ಸಿನಲ್ಲಿ ಮುಖ್ಯ ನ್ಯಾ ಯಸ್ಥಾನದಲ್ಲಿ 11 ಮಂದಿ ಸ್ತ್ರೀಯರು ಮತ್ತು ಒಬ್ಬ ಪುರುಷನಿಂದ ಕೂಡಿದ್ದ ಜ್ಯೂರಿಯವರು ಲೋಕ ಪ್ರಖ್ಯಾತ ಹಾ ಸ್ಯಗಾರ ನಟ ಚಾರ್ಲಿ ಚಾಪ್ಲಿನ್ ಮೇ ಲೆ ಬಂದಿದ್ದ ಮೊಕದ್ದಮ್ಮೆಯಲ್ಲಿ ಜೋ ನ್ ಬೇರಿಯಳ 18 ತಿಂಗಳ ಮಗುವಿಗೆ ಈತನೇ ತಂದೆಯೆಂದು ನಿರ್ಣಯಿಸಿದರು.

ಈ ದಿವಸ ಬೆಳಿಗ್ಗೆ ಮೈಸೂರಿನಿಂದ ಬಾನರಾಜನಗರಕ್ಕೆ ರೈಲು ಇಸ್ಪೇನು ಹೊರಡಬೇಕು (ಗಂಟೆ 7—25') ಆ ಪ್ಲಟ್‌ಫಾರ್ಮಲ್ಲಿ ಪೋಲೀಸಿನವರಿಗೂ ಇನ್‌ಜನ್ ಫೈರ್ ವೆ ನ್ನಿಗೂ ಜಗಳವಾಗಿ ಗಾಡಿ ಹೊ ರಡಲು ಅರ್ಧ ಗಂಟೆ ತಡವಾಯಿತು. ಫೈರ್‌ಮೆನ್ ರೈಲ್ವೆಲೈನಿನ ಮೇಲೆ ಓಡಾ ಡಲು ಬಿಡದಿದ್ದುದೇ ಕಾರಣವಂತೆ.

ತಾ || 16-4-45 ರಲ್ಲಿ ಸಂಭವಿಸಿದ ಸಂಭವಿಸಿದ ಒಂದು ಗೃಹಯೋಗ ಬಲ ದಿಂದ ಕ್ಷೀಪ್ರದಲ್ಲಿಯೇ ಅತ್ಯಂತ ಮ ಹತ್ವವನ್ನುಳ್ಳ ವಿಚಿತ್ರ ಸಂಗತಿಯು ಹೊಸಜೀವವೆಂದು ದೈವಜ್ಞರೊಬ್ಬ ತಿಳಿಸುತ್ತಾರೆ ಮಿತ್ರಮಂಡಲಿಯು ವಿಶ್ವಸ್ಯಯತ್ನದ ಸಾಫಲ್ಯವೇ ಇರ ಬೇಕಲ್ಲವೇ.

ಕನರಾ ಜಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ರವರು ಇದೇ ತಿಂಗಳ 21 ನೇ ತಾರೀ ಖು ಶನಿವಾರ ಧಾರವಾಡದಲ್ಲಿ ಸ್ವಾಮಿ ಚಿನ್ಮಯ ಸ್ವಾಮಿಗಳಲ್ಲಿ ತಮ್ಮ ಬ್ಯಾಂಕಿನ ಶಾಖೆಯೊಂದನ್ನು ಪ್ರಾರಂಭಿಸುವರು.

ಬ್ರಿಟಿಷರ ಹೊಸ ಮಿಷಿನ್‌ಗನ್ನನ್ನು ತೋರಿಸುವ ಚಿತ್ರ

ಹಿಟ್ಲರ್‌ನ ನಿರಾಶೆ

ಒರ್ಡಿನ್ಸಿಗೆ ರಷ್ಯನ್ನರು ಬಹಳ ಹತ್ತಿರ ಬಂದಿದ್ದಾರೆ. ಇವರ ಗುಂಡಿನ ಶಬ್ದ ಅಲ್ಲಿಗೆ ಕೇಳುತ್ತಿದೆ. ಹಿಟ್ಲರನು ನಿರಾಶೆ ಯಿಂದ ವೀರಾವೇಶದಿಂದಾಗಿ ಜರ್ಮನರು ಕಾದಾಡಬೇಕೆಂದೂ, ಯಾರಾದರೂ ರಣ ರಂಗದಿಂದ ಹಿಂದಿರುಗಿದರೆ ಅಂಥವರನ್ನು ಅಲ್ಲಲ್ಲೇ ಗುಂಡುಹೊಡೆದು ಸಾಯಿಸಿ ಬೇಕೆಂದೂ ರಷ್ಯನರ ಕೈಗೆ ತಮ್ಮ ಹೆಂ ಡಿರು ಸಿಕ್ಕಿದರೆ ಬ್ಯಾರಕ್ಕಿನ ಸೂಳೆಯರ ಸ್ಥಿತಿಯಾಗುವುದೆಂದೂ ಪುನಃತಾಗಿ ಹೇ ಳಿರುವನು.

ವಾರ್ ಪೇಪರ್‌ಗಳಿಗೆ ಕೊರತೆಗೆ ಕಾರಣ !

ವಾರ್ ಪೇಪರ್‌ಗಳನ್ನು ಜರ್ಮನ್ನರು ಬೇಕಂತಲೇ ಶತ್ರುಗಳ ಕೈಗೆ ಬಿಟ್ಟರಂತೆ. ಈತನಿಂದಾದರೂ ಶಾಂತಿ ಪರತ್ವು ಸ್ವಲ್ಪ ಸಡಿಲವಾಗಲೆಂಬ ಆಶೆಯಿಂದಲಂತೆ.

ಮಿಠಾಯಿ ಅಂಗಡಿ ಹರತಾಳ

ಕಲ್ಕತ್ತಾದಲ್ಲಿ ಸಕ್ಕರೆ ಕೋಟಾವ ನ್ನು ಶೇಕಡ 40 ರಂತೆ ಕಮ್ಮಿ ಮಾಡಿದ್ದ ರಿಂದ ಅಲ್ಲಿಯ 2000 ಮಿಠಾಯಿ ಅಂಗ ಡಿಯವರು 17 4-45 ರಲ್ಲಿ ಅಂಗಡಿಗಳ ನ್ನೆಲ್ಲಾ ಮುಚ್ಚಿದ್ದರು.

ಉಗ್ರಾಣಗಳು

ಸರಕಳೂರಿನಲ್ಲಿ ಸರಕಾರದವರು ಎರ ಡು ಸಾವಿರ ಟನ್ ದವಸ ಹಿಡಿಯುವ ಒಂದು ಕಣಜವನ್ನು ಕಟ್ಟಿ ದವಸವನ್ನು ದಾಸ್ತಾನು ಮಾಡುವರು. ಅಲ್ಲದೆ ಧಾ ನ್ಯಗಳನ್ನು ಚೀಲಗಳಲ್ಲಿ ತುಂಬಿಡುವ 27 ಚಿಕ್ಕ ಕಣಜಗಳನ್ನು ಕಟ್ಟುವರಂತಾಗಿ ರುವರು.

ಸೂಚನೆ

ನಾಳೆಯ ದಿವಸ ಶ್ರೀ ರಾಮನವಮಿ ಪ್ರಯುಕ್ತ ಪತ್ರಿಕೆಯು ಪ್ರಕಟಿಸಲ್ಪಡು ವುದಿಲ್ಲ. ಮ್ಯಾನೇಜರ

ಯುದ್ಧ ವಾರ್ತೆ

ಹಾಲೆಂಡ್— ಚೀಕ್ಕೊಲ್ಲಿಯ ಹತ್ತಿರ ಒಂದು ಪಟ್ಟಣ ಮಿತ್ರರ ಕೈಸೇರಿತು.

ಇಟಲಿ— ಗೂರ್ಖ ಸೇನೆ ಮೆಡಿಚಿನಾ ನಗರವನ್ನು ಹಿಡಿದಿದೆ.

ಬರ್ಮಾ— ಪ್ಯೇಗೊ ಊರು ಮಿತ್ರರ ವಶವಾಯಿತು.

ಜರ್ಮನಿ— ಚೆಮ್ನಿಟ್ಸ್ ಪಟ್ಟಣ ವನ್ನು ಶರಣಾಗತವಾಗಬೇಕೆಂದು ಮಿತ್ರ ರು ಕೇಳಿದರು ; ಜರ್ಮನರು ಒಪ್ಪಲಿಲ್ಲ.

ಮಿತ್ರ ಸೇನೆಯವರು ಈವರೆಗೆ ಯೂ ರೋಪಿನ ನಾನಾ ರಾಜ್ಯಗಳಲ್ಲಿ 18 ರಾ ಜಧಾನಿಗಳನ್ನೂ ಶತ್ರುಗಳಿಂದ ಬಿಡಿಸಿ ಆಯಾ ಜನಾಂಗಕ್ಕೆ ವಾಪಸ್ ಕೊಟ್ಟಿ ರುವರು.

ವಿವಿಧ ವರ್ತಮಾನ

ದೆಹಲಿಯಲ್ಲಿ ದಿವಸಕ್ಕೆ ಹತ್ತು ವಾಸದ ಮನೆಗಳನ್ನು 48 ನಿಮಿಷದಲ್ಲಿ ಒಂದ ರಂತೆ ಕಟ್ಟುತ್ತಿರುವರು. ಈ ಕಾಲನಿ ಯಲ್ಲಿ ಆಸ್ಪತ್ರೆ, ಆರೋಗ್ಯ ಇಲಾಖೆ ಕೆರಿಗೆ ಆಸ್ಪತ್ರೆ ಹುಡುಗರ ಪಾಠಶಾಲೆ ಅಂಗಡಿ ಮಿಗಸಗಟ್ಟು ಗಾಡಿಗಳ ಚೌಕ ಸಿನಿಮಾಹಾಲ್ ಲೈಬ್ರರಿ, ಪಾರ್ಕು ಆಟ ದ ಸ್ಥಳ ಇವನ್ನು 30 ಕೋಟಿ ರೂ. ಅಂ ದಾಜಿನಲ್ಲಿ ಕಟ್ಟುವರು. ಈವರೆಗೆ ಇ ಷ್ಟು ಬೇಗ ಮನೆಗಳನ್ನು ಯಾರೂ ಕಟ್ಟು ತ್ತಿರಲಿಲ್ಲ.

ಬೊಂಬಾಯಿ-ಡೆಲ್ಲಿ ವಿಮಾನ ಪ್ರ ಯಾಣವು ನಿನ್ನೆಯಿಂದ ಪ್ರಾರಂಭವಾ ಯಿತು.

ಮಂಗಳೂರಿನಲ್ಲಿ 12 ಆಣೆ ಬೆಲೆ ಯ ಒಂದು ಇಸ್ಪೀಟು ಪ್ಯಾಕನ್ನು ರೂ. 4-8-0 ಗೆ ಮಾರಿದ್ದಕ್ಕೆ ರೂ. 2500 ಜು ಲ್ಮಾನೆಯಾಯಿತು.

ಲಾಹೋರಿನಲ್ಲಿ ಎಂ. ಎ. ಪರೀಕ್ಷೆ ಯ ಲೆಖ್ಖದ ಪ್ರಶ್ನೆಪತ್ರಿಕೆಯಲ್ಲಿ ಪುನಃ ಪರೀಕ್ಷೆ ಮಾಡಬೇಕೆಂದು 6 ವಿದ್ಯಾರ್ಥಿ ಗಳು ಸೇರಿ ಒಟ್ಟು 55 ಮಂದಿ ಪರೀ ಕ್ಷೆಗೆ ಹೋಗದೆ ನಿಂತರು. 9 ಮಂದಿ ಮಾತ್ರ ಪರೀಕ್ಷೆಗೆ ಕೂತರು. ರಿಜಿಸ್ಟ್ರಾ ರರು ಸೋಡಿ ಕೂಡುತ್ತೇನೆಂದರೂ ಕೇ ಳಲಿಲ್ಲ.

ಮಾತಾಪಿತೃಗಳು ಹಣವನ್ನು ತೆಗೆ ದುಕೊಂಡು ತಮ್ಮ ಚಿಕ್ಕ ವಯಸ್ಸಿನ ಹುಡುಗರನ್ನು ಜೀತಗಾರಿಕೆಗೆ ಇಡುವು ದನ್ನು ತಪ್ಪಿಸುವ ಮಸೂದೆಯು ಶಾಸನ ರದಲ್ಲಿ ಜಾರಿಗೆ ಬಂದಿತು.

ಉದ್ಯಮದ ಬಗ್ಗೆ ಪ್ರಶ್ನಿಸಿದರೆ ಲಂಡನ್ನಿನವರು ವಾಸಿಸುವ ಬೀದಿಯನ್ನು ತಿಳಿಸುವರು !

ನೀನು ಲಂಡನ್ನಿನ ಒಬ್ಬ ನಿವಾಸಿಯನ್ನು 'ನಿನ್ನ ಕಸಬೀನು' ಎಂದು ಕೇಳಿದರೆ, ಅವನು ತಾನು ವಾಸವಾಗಿರುವ ಬೀದಿಯ ಹೆಸರನ್ನು ಹೇಳುವನು. ಇದರಿಂದ ನಿಮಗೆ ಅವನು ಯಾವ ಉದ್ಯೋಗ ಮಾಡುವನೆಂಬುವುದ. ಗೊತ್ತಾಗುವುದು

ಲಂಡನ್ನಿನ ಪ್ರಮುಖ ವೈದ್ಯರೆಲ್ಲಾ ಹಾರ್ಲಿ ಬೀದಿಯಲ್ಲಿ ವಾಸ ಮಾಡುವರು. ವೃತ್ತಪತ್ರಿಕೆಗಳವರೆಲ್ಲಾ ಫ್ಲೀಟ್ ಬೀದಿಯಲ್ಲಿ ವಾಸಮಾಡುವರು. ಪಜ್ರ ವ್ಯಾಪಾರಿಗಳು ಹಿಟ್ಟನ್ ಗಾರ್ಡನ್ನಿನಲ್ಲಿ ಅಂಗಡಿ ಇಟ್ಟಿರುವರು, ವ್ಯಾಪಾರ ನಡೆಸುವರು. ಆಹಾರ ಪದಾರ್ಥಗಳನ್ನು ಮಾರುವ ದೊಡ್ಡ ಅಂಗಡಿಯವರು ಈಸ್ಟ್ ಚೀಪ್‌ನಲ್ಲಿರುವರು. ಗುಂಧಿಗೆಯವರು ಟೂಲಿ ಬೀದಿಯಲ್ಲಿರುವರು ದಸನೆದ ದಳ್ಳಾಳಿಗಳು ಮಾರ್ಕ್‌ನಲ್ಲಿರುವರು. ರಬ್ಬರ್ ವ್ಯಾಪಾರಿಗಾರರು ವಿಕ್‌ಸಿಂಗಿನಲ್ಲಿರುವರು. ಪ್ರಪಂಚದ ಬ್ಯಾಂಕ್‌ಗಳ ಶಾಖೆಗಳು ಲಂಬಾರ್ಡ್ ಬೀದಿಯಲ್ಲಿವೆ ತ್ರೆಗೋರ್ಟನ್ ಬೀದಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಕಾರ್ಯಾಲಯಗಳು ನೂರಾರಿವೆ. ಲೆಡಿನ್ ಹಾದಿಯಲ್ಲಿ ಹಡಗಿನ ಕಂಪನಿಗಳಿವೆ. ಸೋವಿಲೆರೋ ಬೀದಿಯಲ್ಲಿ ಆರ್ಜಿ ಅಂಗಡಿಗಳಿವೆ. ಹೀಗೆ ನಾನಾ ಕೆಲಸಗಾರರು ಒಂದೊಂದು ಬೀದಿಯಲ್ಲಿರುತ್ತಾರೆ.

ಹಾರ್ಲೀ ಬೀದಿಯಲ್ಲಿ ವೈದ್ಯರಿರುವರಷ್ಟೇ ಅಲ್ಲಿರುವ 150 ದೊಡ್ಡ ಮನೆಗಳಲ್ಲಿ 4 ಅಂತಸ್ತುಗಳಿವೆ. ಸಣ್ಣ ಮನೆಗಳು 3 ಅಥವಾ 4 ಮಾತ್ರಾ ಇವೆ. ಒಂದೊಂದು ಮನೆಯಲ್ಲಿ 8–10 ವೈದ್ಯರು ವಾಸಿಸುವರು. ಹಿಂದೆ ಹಾರ್ಲಿ ಬೀದಿಯಲ್ಲಿ ವೈದ್ಯರು ವಾಸಮಾಡುತ್ತಿದ್ದರು. ಈಗ ಮನೆಗಳು ಕಡಮೆಯಾಗಿ ತಮ್ಮ ಬೋರ್ಡುಗಳನ್ನು ಮನೆಯ ಮುಂದೆ ಹಾಕಿಕೊಂಡು, ಅರ್ಧ ದಿವಸ ಲಂಡನ್ ಆಸ್ಪತ್ರೆಯಲ್ಲಿ ಕೆಲಸಮಾಡುವರು. ಇಲ್ಲಿ ಆಪರೇಷನ್ ನಡೆಸುವುದು, ಕಾಹಿಲೆಯವರನ್ನು ವಾರ್ಡುಗಳಲ್ಲಿ ನೋಡುವುದು, ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು, ಈ ಕೆಲಸಗಳಲ್ಲಿ ನಿರತರಾಗಿರುವರು. ಇದಕ್ಕೆ ಇವರಿಗೆ ಸಂಭಾವನೆ ಕಮ್ಮಿ. ಕೆಲವು ವೇಳೆ ಯಾವ ಬಗೆಯ ಪಾರಿತೋಷಕವೂ ಇಲ್ಲದೆ ಕೆಲಸ ಮಾಡುವರು. ಆಸ್ಪತ್ರೆಯ ಕೆಲಸ ಮುಗಿಸಿಕೊಂಡು ತಮ್ಮ ಕನ್ಸಲ್ಟಿಂಗ್ ರೂಮಿಗೆ ಬರುವರು. ಅಲ್ಲಿ 1–20 ರೋಗಿಗಳನ್ನು ಪರೀಕ್ಷಿಸಿ ಒಬ್ಬೊಬ್ಬ ರೋಗಿಯಿಂದ 13 ಷಿಲಿಂಗುಗಳನ್ನು ವಸೂಲ್ಮಾಡುವರು. ಅವರಿಗೆ ಯಾವ ಯಾ ಔಷಧೋಪಚಾರ ಅವಶ್ಯಕವೆನ್ನುವುದನ್ನು ಹೇಳುತ್ತಾರೆ. ಡಾಕ್ಟರುಗಳ ಫೀಜು ಕಾಹಿಲೆಗಳ ರೋಗಿಯ ಅಂತಸ್ತುಗಳ ಮೇಲೆ ಏರುಪೇರಾಗುವುದು. ಈ ಬೀದಿಯಲ್ಲೇ ಬ್ರಿಟಿಷ್ ಮಂತ್ರಿ ಗ್ಲಾಡ್‌ಸ್ಟನ್ ವಾಸವಾಗಿದ್ದನು. ಈಗಲೂ ಆ ಮನೆಯಿದೆ. ಈಗ ನೂರು ವರ್ಷದಿಂದ ಹಾರ್ಲಿ ಬೀದಿಯು ವೈದ್ಯರುಗಳ ಮನೆಯಾಗಿದೆ. ಹಾರ್ಲಿ ಬೀದಿಯಲ್ಲಿನ ವೈದ್ಯರುಗಳೆಂದರೆ ರೋಗಿಗಳು ತಮ್ಮ ಕಾಯಿಲೆ ವಾಸಿಯಾದಂತೇ ಎಂದು ತಿಳಿಯುವರು.

ಹಾರ್ಲಿ ಬೀದಿಯು ವೈದ್ಯರಿಗಾಗಿ ಕಟ್ಟಿದ್ದಲ್ಲ. ಹಿಂದೆ ಇದ್ದ ಭಾರಿ ಲಂಚವನ್ನು ನಿರ್ಮೂಲಕರಿಗಾಗಿ. ಲಂಡನ್ ಅಭಿವೃದ್ಧಿಯಾದ ಹಾಗೆಲ್ಲಾ ಅವರು ಆ ಸ್ಥಳಗಳನ್ನು ಬಿಟ್ಟರು. ಒಬ್ಬ ವೈದ್ಯನಿಗೆ ಹಾರ್ಲಿ ಬೀದಿಯವನೆಂದರೆ ಅಡಿನೊಬ್ಬ ಪ್ರಸಿದ್ಧ ವೈದ್ಯನೆಂದು ಹೆಸರಾಗಿದೆ.

ಸಾಲ್‌ಮೆಂಟಿನಲ್ಲಿ ಮಿ॥ ಚರ್ಚಿಲ್ಲರು, ರೂಸ್ವೆಲ್ಟರು ಬ್ರಿಟನ್ನಿನ ಹಿರಿಯ ಮಿತ್ರರೂ, ಸ್ವಾತಂತ್ರ್ಯ ಡಕ್ಟರಲ್ಲಿ ಮಹಾ ಪುರುಷರೂ ಪ್ರಪಂಚವು ಕಾಣದಿದ್ದ ಎಂಥ ಸಾಲವನ್ನು ವ್ಯವಸ್ಥೆಮಾಡಿದವರೂ ಆಗಿರುವರೆಂದು ಹೇಳಿದರು.



ಐ. ಜೆ. ಹಾಲ್, ಅಶೋಕ ರಸ್ತೆ
ರೈಲ್ವೇ ಬೀದಿ, ಮೈಸೂರು

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ

6 ನೇ ಅಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ನೋತಿಲಾಲ್ ಜೇಕ್‌ಮುಕ್ತಾರ್ ಪಾತ್ರವಹಿಸಿರುವರು

From 20-4-45

ಪೂರ್ಣಿಮಾ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT OPERA — 2 ನೇ ವಾರ

POOMPAVAI

'ಪೂಂಪಾವೈ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ವಿ.ಧುರಂ, ಕೃಷ್ಣ.

Morning Shows, From 20—4—45 "BELLE STARR"

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು